

# ಗಾಲಿ ಕುರ್ಚಿಯಲ್ಲಿ ನೃತ್ಯ!

**ಗಾಲಿ ಕುರ್ಚಿಗಳ ಮೇಲೆ ಕುಳಿತು ವಿಕಲಾಂಗ ಕಲಾವಿದರು ಭರತನಾಟ್ಯ, ಸೂಫಿ ನೃತ್ಯ, ನೃತ್ಯ ರೂಪಕಗಳನ್ನು ಪ್ರದರ್ಶಿಸಿದರೆ ಇವರು ಅಂಗವಿಕಲರು ಎಂದು ಮೇಲ್ನೋಟಕ್ಕೆ ಅನಿಸುವುದೇ ಇಲ್ಲ.**

■ **ಉಮಾ ಅನಂತ್**

ನಾದ್ರು ಧೀಂ ಧೀಂ ತನ ಧಿರನ... ಮೇಳಕರ್ತ ರಾಗ ಧೀರ ಶಂಕರಾಭರಣ ರಾಗದ ಈ 'ತಿಲ್ಲಾನ'ದಲ್ಲಿ ಭರತನಾಟ್ಯ ನೋಡಲು ತುಂಬ ಚೆಂದ. ಇದರಲ್ಲಿನ ಅಡವುಗಳನ್ನು ನೃತ್ಯದಲ್ಲಿ ಅಭಿವ್ಯಕ್ತಿಸುವುದು ಕಷ್ಟ. ಇದನ್ನೇ ವಿಕಲಾಂಗ ಕಲಾವಿದನೊಬ್ಬ ನೃತ್ಯ ಮಾಡಿ ತೋರಿಸಿದರೆ..?

'ಅಂಗವಿಕಲನೊಬ್ಬ ನೃತ್ಯ ಮಾಡುವುದು ಹೇಗೆ ಸಾಧ್ಯ?' ಎನ್ನುವವರೇ ಹೆಚ್ಚು. ಸಾಧ್ಯವಿದೆ..! ಭರತನಾಟ್ಯದ ಎಲ್ಲ ನಿಯಮಾವಳಿಗಳನ್ನು ತಪ್ಪದೆ ಪಾಲಿಸಿ ವಿಕಲಾಂಗ ಕಲಾವಿದರು ಇದನ್ನು ವೇದಿಕೆ ಮೇಲೆ ಪ್ರಸ್ತುತ ಪಡಿಸುತ್ತಾರೆ. ಗಾಲಿ ಕುರ್ಚಿಗಳ ಮೇಲೆ ಕುಳಿತು ಈ ಕಲಾವಿದರು ಭರತನಾಟ್ಯ, ಸೂಫಿ ನೃತ್ಯ, ನೃತ್ಯ ರೂಪಕ, ಕಳರಿ ಪಯಟ್‌ನಂತಹ ಸಮರ ಕಲೆಯನ್ನು ಮಾಡಿದರೆ ಇವರು ಅಂಗವಿಕಲರು ಎಂದು ಮೇಲ್ನೋಟಕ್ಕೆ ಅನಿಸುವುದೇ ಇಲ್ಲ.

ನಾಟ್ಯಶಾಸ್ತ್ರದ ಕರ್ತೃ ಭರತಮುನಿ ತಮ್ಮ ನಾಟ್ಯಶಾಸ್ತ್ರದಲ್ಲಿ 'ನೃತ್ಯ ಕಲಾವಿದನಾಗ ಬಯಸುವವನು ದೈಹಿಕ ಮತ್ತು ಮಾನಸಿಕವಾಗಿ ಸಮರ್ಥನಾಗಿರಬೇಕು' ಎಂದು ಬರೆದಿದ್ದಾನೆ. ಆದರೆ ವಿಕಲಾಂಗರಿಗಾಗಿ ಮುಡಿಪಾಗಿರುವ ವಿಶ್ವವಿಖ್ಯಾತ ನೃತ್ಯ ಸಂಸ್ಥೆ ದೆಹಲಿಯ 'ಎಬಿಲಿಟಿ ಅನ್‌ಲಿಮಿಟೆಡ್ ಫೌಂಡೇಶನ್'ನ ಸುಮಾರು 150 ಕಲಾವಿದರು ಈ ಮಾತನ್ನು ಅಲ್ಲಗಳೆದಿದ್ದಾರೆ.

ಈ ಕಲಾವಿದರು ಗಾಲಿ ಕುರ್ಚಿಯನ್ನೇ ಶ್ರೀಕೃಷ್ಣನ ರಥವಾಗಿ ಬಳಸಿ ನೃತ್ಯ ಮಾಡುತ್ತಾರೆ. ಭರತನಾಟ್ಯದ ನೃತ್ಯ–ನೃತ್ತ ಎರಡನ್ನೂ ಅದ್ಭುತವಾಗಿ ಅಭಿವ್ಯಕ್ತಿಸುತ್ತಾರೆ. ಸ್ವರಜತಿ, ವರ್ಣ, ತಿಲ್ಲಾನ, ಅಡವುಗಳು ಅತ್ಯಂತ ನೈಜವಾಗಿ ಅನಾವರಣಗೊಳ್ಳುತ್ತದೆ. ಸೂಫಿ ನೃತ್ಯ ವೇದಿಕೆ ಮೇಲೆ ಸಾಕಾರಗೊಳ್ಳುತ್ತದೆ. ಇದರ ಹಿಂದಿನ ಪರಿಶ್ರಮ, ಸಾಧನೆ, ಅನ್ವೇಷಣೆ ಬೆಂಗಳೂರಿನ ಸಮೀಪದ ಆನೇಕಲ್ ಮೂಲದ ನೃತ್ಯಗುರು ಸಯ್ಯದ್ ಸಲ್ಲಾವುದ್ದೀನ್ ಪಾಶ ಅವರದು.

ವಿಶ್ವದಾದ್ಯಂತ ಅನೇಕ ರಾಷ್ಟ್ರಗಳಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು

41ನೇ ಪುಟ ನೋಡಿ



ಚಿತ್ರಗಳು ಸಯ್ಯದ್ ಸಲ್ಲಾವುದ್ದೀನ್ ಪಾಶ